

# ಥೈರಾಯ್ಡ್‌ಗೆ ಗಾಯರಹಿತ ಸರ್ಜರಿ!

**ಥೈರಾಯ್ಡ್ ಸಮಸ್ಯೆ ನಿವಾರಣೆಗೆ ಅತ್ಯಂತ ಸುಧಾರಿತ ಶಸ್ತ್ರಚಿಕಿತ್ಸೆಯೊಂದು ಬಂದಿದ್ದು, ಹೆಚ್ಚಿನ ಯಾವುದೇ ಗಾಯವಿಲ್ಲದೆ ನಾಜೂಕಾಗಿ ಮಾಡುವ ವಿಧಾನವಿದು. ಶಿವಮೊಗ್ಗದ ವೈದ್ಯರು ಈ ಅಪರೂಪದ ಶಸ್ತ್ರಚಿಕಿತ್ಸೆ ನಡೆಸುವಲ್ಲಿ ಯಶಸ್ವಿಯಾಗಿದ್ದು, ರೋಗಿಗಳಿಗೆ ಇದೊಂದು ವರದಾನವಾಗಿದೆ.**

**■ ಉಮಾ ಅನಂತ್**

ಚಿಕ್ಕಮಗಳೂರಿನ ಹದಿನೇಳು ವರ್ಷದ ಬಾಲಕಿಗೆ ಥೈರಾಯ್ಡ್ ಸಮಸ್ಯೆ. ತಮ್ಮ ಕುಟುಂಬ ವೈದ್ಯರ ಬಳಿ ಎಷ್ಟೇ ಚಿಕಿತ್ಸೆ ಕೊಡಿಸಿದರೂ ಫಲಕಾರಿಯಾಗದ ಕಾರಣ ಈಕೆಯನ್ನು ಹೆತ್ತವರು ಶಿವಮೊಗ್ಗದ ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತಂದರು. ಬಾಲಕಿಯನ್ನು ಪರೀಕ್ಷಿಸಿದ ವೈದ್ಯರು ಈ ಸಮಸ್ಯೆಗೆ ಶಸ್ತ್ರಚಿಕಿತ್ಸೆ ಒಂದೇ ದಾರಿ ಎಂಬ ತೀರ್ಮಾನಕ್ಕೆ ಬಂದರು. ಕುಟುಂಬದ ಸದಸ್ಯರ ಒಪ್ಪಿಗೆ ಪಡೆದು ಈಕೆಗೆ ವಿನೂತನ ರೀತಿಯ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಸರ್ಜರಿ ನಡೆದ ಬಳಿಕ ಕೇವಲ ಅರ್ಧ ಗಂಟೆಯಲ್ಲೇ ಮಾತನಾಡಲಾರಂಭಿಸಿದ ಹುಡುಗಿ ಒಂದೇ ದಿನದಲ್ಲಿ ಚೇತರಿಸಿಕೊಂಡಳು. ಅಲ್ಲದೆ ಸರ್ಜರಿಯ ಮರುದಿನವೇ ಹುಷಾರಾಗಿ ಮನೆಗೆ ಮರಳಿದಳು.

ಇದೊಂದು ಹೊಸ ಹಾಗೂ ಅತ್ಯಾಧುನಿಕ ಶಸ್ತ್ರಚಿಕಿತ್ಸೆ. ಸರ್ಜರಿ ಮಾಡಿದ ಜಾಗದಲ್ಲಿ ಕಲೆಯೇ ಇಲ್ಲದೆ, ಬಹಳ ಕಡಿಮೆ ನೋವು ಮತ್ತು ಅತ್ಯಂತ ಸಣ್ಣ ರಂಧ್ರದ ಮೂಲಕ ಮಾಡುವ ಶಸ್ತ್ರಚಿಕಿತ್ಸೆ ಇದು. ಹಾಗೆಂದು ಇದು ಲ್ಯಾಪ್ರೊಸ್ಕೋಪಿಕ್ ಸರ್ಜರಿಯಲ್ಲ. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಸ್ಕಾರ್‌ಲೆಸ್ ಸರ್ಜರಿ' ಎಂದು ಕರೆಯಲಾಗುತ್ತದೆ.

## ಏನಿದು ಸ್ಕಾರ್‌ಲೆಸ್ ಸರ್ಜರಿ?

ಥೈರಾಯ್ಡ್'ಗೆ ಸಂಬಂಧಿಸಿದ ಟ್ರಾನ್ಸ್ ಓರಲ್ ಎಂಡೊಸ್ಕೋಪಿಕ್ ಥೈರಾಯ್ಡೆಕ್ಟಮಿ ವೆಸ್ಟಿಬುಲರ್ ಅಪ್ರೋಚ್ (ಟಿಒಇಟಿವಿಎ) ಎಂಬ ಈ ಸರ್ಜರಿ ಅತ್ಯಂತ ಸುಧಾರಿತವಾದದ್ದು. ಇದೊಂದು ಗಾಯರಹಿತ (ಸ್ಕಾರ್‌ಲೆಸ್) ಸರ್ಜರಿ. ಸಾಮಾನ್ಯವಾಗಿ ಥೈರಾಯ್ಡ್ ಸಮಸ್ಯೆ ನಿವಾರಣೆಗೆ ಕುತ್ತಿಗೆ ಭಾಗದಲ್ಲಿ ಚರ್ಮವನ್ನು ಕೊಯ್ದು ಶಸ್ತ್ರಚಿಕಿತ್ಸೆ ನಡೆಸಿ ಹೊಲಿಗೆ ಹಾಕಲಾಗುತ್ತದೆ. ಇಂತಹ ಸರ್ಜರಿಯಲ್ಲಿ ಕಲೆ ಅಥವಾ ಗುರುತು ಉಳಿದುಬಿಡುತ್ತದೆ. ಇದು ಚಿಕ್ಕ ವಯಸ್ಸಿನ ಯುವತಿಯರಿಗೆ, ರೂಪದರ್ಶಿಗಳಿಗೆ ಹಾಗೂ ಸೌಂದರ್ಯದ ಬಗ್ಗೆ ಹೆಚ್ಚು ಕಾಳಜಿಯುಳ್ಳವರಿಗೆ ಸಮಸ್ಯೆಯಾಗಿ ಕಾಡುತ್ತದೆ.

'ಈ ನೂತನ ವಿಧಾನದಲ್ಲಿ ಕುತ್ತಿಗೆ ಹೊರತುಪಡಿಸಿ ಬೇರೆ ಭಾಗದಿಂದ ರಿಮೋಟ್ ಆಕ್ಸೆಸ್ ಎಂಬ ವಿಧಾನದ ಮೂಲಕ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಇದರಲ್ಲಿ ದೇಹದ ಸ್ವಾಭಾವಿಕ ರಂಧ್ರಗಳ ಮೂಲಕ ದರ್ಶಕಗಳನ್ನು ಬಳಸಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ (**Natural Orifice Transluminal Endoscopic Surgery**). ಬಾಯಿ, ವಸಡು ಹಾಗೂ ಕೆಳತುಟಿಯ ಭಾಗದಲ್ಲಿ ಒಂದು ಸೆಮೀ ಹಾಗೂ ಅಕ್ಕಪಕ್ಕದಲ್ಲಿ ಅರ್ಧ ಸೆಮೀನಷ್ಟು ಎರಡು ರಂಧ್ರ ಕೊರೆಯಲಾಗುತ್ತದೆ. ಆನಂತರ ಚರ್ಮದ ಕೆಳಭಾಗದಲ್ಲಿ ಸಣ್ಣ ಕೊಳವೆ ಹೋಗುವ ರೀತಿ ಮಾಡಿ, ಕುತ್ತಿಗೆಯ ಮೂಲಕ ಥೈರಾಯ್ಡ್ ತಲುಪಿ ಶಸ್ತ್ರಚಿಕಿತ್ಸೆ ನಡೆಸಿ ಅದನ್ನು ಹೊರತೆಗೆಯಲಾಗುತ್ತದೆ' ಎಂದು ವಿವರಿಸುತ್ತಾರೆ ಶಿವಮೊಗ್ಗದ ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎಂಡೊಕ್ರೈನ್ ಮತ್ತು ಆಂಕೋಪ್ಲಾಸ್ಟಿಕ್ ಶಸ್ತ್ರಚಿಕಿತ್ಸಕರಾಗಿರುವ ಡಾ. ಶ್ರೇಯಾಂಸ ಎಂ.

'ಇದು ವೈದ್ಯಲೋಕದಲ್ಲೇ ಅತ್ಯಂತ ವಿನೂತನ ವಿಧಾನ. ಶಸ್ತ್ರಚಿಕಿತ್ಸೆ ನಡೆಸಿ ಭಾಗದಲ್ಲಿ ಯಾವುದೇ ಕಲೆ ಅಥವಾ ಗಾಯದ ಗುರುತು ಉಳಿಯುವುದಿಲ್ಲ. ಬಾಯಿಯ ಒಳಭಾಗದಲ್ಲಿ ರಂಧ್ರ ಮಾಡಿದ ಜಾಗದಲ್ಲಿ ಹಾಕುವ ಸಣ್ಣ ಹೊಲಿಗೆ ತಾನಾಗಿಯೇ ಕರಗಿ ಹೋಗುವುದರಿಂದ ಹೊಲಿಗೆ ತೆಗೆಸಬೇಕು ಎಂಬ ಸಮಸ್ಯೆಯಿಲ್ಲ. ಅತಿ ಕಡಿಮೆ ನೋವು ನೀಡುವ ಈ ಸರ್ಜರಿ ಮಾಡಿಸಿಕೊಂಡರೆ ಆಸ್ಪತ್ರೆ ವಾಸ ಅತ್ಯಂತ ಕಡಿಮೆ ದಿನದ್ದಾಗಿರುತ್ತದೆ. ಇಷ್ಟೆಲ್ಲ ಸುರಳೀತ ವಿಧಾನ ಇದಾದರೂ ಈ ಸುಧಾರಿತ ಶಸ್ತ್ರಚಿಕಿತ್ಸೆಯನ್ನು ಅತ್ಯಂತ ಪರಿಣತಿ ಹೊಂದಿರುವ ವೈದ್ಯರು ಮಾತ್ರ ನೆರವೇರಿಸಬೇಕು. ಚಿಕಿತ್ಸೆಯ ವೇಳೆ ಇತರ ಯಾವುದೇ ಸೂಕ್ಷ್ಮ ಅಂಗಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕಾಗುತ್ತದೆ' ಎಂದು ಹೇಳುತ್ತಾರೆ ಈ ವೈದ್ಯರು.

ಇದು ಥೈರಾಯ್ಡ್ ಶಸ್ತ್ರಚಿಕಿತ್ಸೆಗೆ ಮಾತ್ರವಲ್ಲದೆ ಗಾಲ್ ಸ್ಟೋನ್ಸ್, ಬೊಜ್ಜು ನಿವಾರಣೆಗೆ ಮಾಡುವ ಸರ್ಜರಿ, ಮೂತ್ರಕೋಶದ ಸರ್ಜರಿ, ಗ್ಯಾಸ್ಟ್ರಿಕ್‌ಗೆ ಸಂಬಂಧಿಸಿದಂತೆ ಮಾಡುವ ಶಸ್ತ್ರಚಿಕಿತ್ಸೆ, ಕೆಲವು ಸ್ತ್ರೀರೋಗಗಳಿಗೆ ಮಾಡುವ ಸರ್ಜರಿ... ಹೀಗೆ ಹಲವು ವಿಧದ ಚಿಕಿತ್ಸೆಗಳಲ್ಲಿ 'ಸ್ಕಾರ್‌ಲೆಸ್ ಸರ್ಜರಿ' ಮಾಡಲಾಗುತ್ತಿದೆ.

ಈ ಸರಳ ಸರ್ಜರಿಯನ್ನು 19 ವರ್ಷದ